

ರೆಕ್ಕೆಪುಕ್ಕ ಮೂಡಿದ್ದೂ ಅಲ್ಲಿಯೇ. ಮೂರು ವರ್ಷಗಳ ನಂತರ, 2017ರಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಬ್ಯಾಡ್ಮಿಂಟನ್‌ನಲ್ಲಿ ಅವರು ಆಡಲು ಆರಂಭಿಸಿದರು. ಪ್ಯಾರಾ–ಬ್ಯಾಡ್ಮಿಂಟನ್ ಆಟಗಾರರು ಸಾಮಾನ್ಯವಾಗಿ ಆಡುವ ಬ್ಯಾಡ್ಮಿಂಟನ್ ಆಟಗಾರರಿಗಿಂತ ಅರ್ಧದಷ್ಟು ಕಡಿಮೆ ಅಗಲ ಇರುವ ಕೋರ್ಟ್‌ನಲ್ಲಿ ಆಡುತ್ತಾರೆ. ಇದರಿಂದಾಗಿ ಅವರ ಚಲನೆಗೆ ಅನುಕೂಲವಾಗುತ್ತದೆ.

2017ರಲ್ಲಿ ಐರಿಷ್ ಪ್ಯಾರಾ ಬ್ಯಾಡ್ಮಿಂಟನ್ ಪ್ರಶಸ್ತಿಯನ್ನು ನಿತೇಶ್ ತಮ್ಮದಾಗಿಸಿಕೊಂಡರು. ಕಠಿಣ ಶ್ರಮ ಹಾಗೂ ಛಲದಿಂದ ಅವರು ಈ ಮಟ್ಟ ತಲುಪಿದ ನಂತರ ಹರಿಯಾಣದ ಕ್ರೀಡಾ ಮತ್ತು ಯುವಜನ ಸೇವಾ ಇಲಾಖೆಯ ಕೇಂದ್ರವೊಂದರಲ್ಲಿ ಹಿರಿಯ ಬ್ಯಾಡ್ಮಿಂಟನ್ ಕೋಚ್ ಆಗಿಯೂ ಕೆಲಸ ಮಾಡಿದರು. 2019ರಲ್ಲಿ ಈ ಜವಾಬ್ದಾರಿ ವಹಿಸಿಕೊಂಡ ನಂತರವೂ ಖುದ್ದು ಆಟವನ್ನು ಸಾಣೆಗೆ ಒಡ್ಡಿಕೊಳ್ಳುವುದರಿಂದ ಅವರು ವಿಮುಖರಾಗಲಿಲ್ಲ.

2022ರ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಒಲಿಯಿತು.

ವರ್ಷಗಳ ಕಾಲ ಪ್ಯಾರಾ ಬ್ಯಾಡ್ಮಿಂಟನ್‌ನಲ್ಲಿ ನಿತೇಶ್ ಪಳಗಿರುವುದಕ್ಕೆ ಸಾಕ್ಷಿಯಂತೆ ಪ್ಯಾರಾಲಿಂಪಿಕ್‌ನ ಅಂತಿಮ ಸೆಟ್‌ನ ಹಣಾಹಣಿ ಕಾಣಿಸಿತು. 23–21ರಲ್ಲಿ ಗೆಲ್ಲುವ ಮೊದಲು ಅವರು ಅವುಡುಗಚ್ಚಿ ಆಡಬೇಕಾಯಿತು. ಏರ್‌ರೈಫಲ್ ಸ್ಪರ್ಧೆಯಲ್ಲಿ ಅವನಿ ಲೇಖ್ರಾ ಅವರ ನಂತರ ಕ್ರೀಡಾಕೂಟದಲ್ಲಿ ಎರಡನೇ ಚಿನ್ನದ ಪದಕವನ್ನು ದಕ್ಕಿಸಿಕೊಟ್ಟ ಹಿರಿಮೆ ನಿತೇಶ್ ಅವರದ್ದಾಯಿತು.

ಕಾಲೇಜಿನಲ್ಲಿ ಓದುವಾಗ ಅಕಸ್ಮಾತ್ತಾಗಿ ಆಯತಪ್ಪಿ ಬಿದ್ದಿದ್ದರಿಂದ ಅವರ ಎಡಗಾಲು ರೈಲಿನ ಚಕ್ರಕ್ಕೆ ಸಿಲುಕಿತ್ತು. ಇಂತಹ ಅಪಘಾತಕ್ಕೆ ಒಳಗಾದ ನಂತರ ಎಂಥವರಿಗೂ ಭವಿತವ್ಯದ ಕುರಿತು ಪ್ರಶ್ನಾರ್ಥಕ ಚಿಹ್ನೆಯೊಂದು ಮೂಡಿಯೇ ಇರುತ್ತದೆ. ನಿತೇಶ್ ಅವರೂ ಇದಕ್ಕೆ ಹೊರತಾಗಿರಲಿಲ್ಲ. ಕೃತಕ ಕಾಲು ಅಳವಡಿಸುವ ಕೇಂದ್ರದಲ್ಲಿ ಅವರು ಕಂಡ ಸ್ಫೂರ್ತಿ ಕಥನಗಳು ಮುಂದೆ ಅವರನ್ನು ಪುಲ್ಲೆಲ ಗೋಪಿಚಂದ್ ಅಕಾಡೆಮಿಯ ಅಂಗಳಕ್ಕೆ ಕರೆದುಕೊಂಡು ಹೋಗಿ ನಿಲ್ಲಿಸಿದ್ದವು. ಪ್ಯಾರಿಸ್ ಒಲಿಂಪಿಕ್‌ಗೆ ತೆರಳುವ ಮೊದಲು ನಿತೇಶ್ ಆಟವನ್ನು ಇನ್ನಷ್ಟು ಗಟ್ಟಿ ಮಾಡಿಕೊಂಡ ಸ್ಥಳ ಅದು.

ಕಳೆದ ಆರು ವರ್ಷಗಳಲ್ಲಿ ನಿತೇಶ್ ಪ್ಯಾರಾ ಬ್ಯಾಡ್ಮಿಂಟನ್ ಆಟವನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಮೊದಲಿಗೆ ಅವರು ತುಳಸಿಮತಿ ಮುರುಗೇಶನ್ ಅವರೊಟ್ಟಿಗೆ ಡಬಲ್ಸ್‌ನಲ್ಲಿ ಆಡಿದರು. ಆರು ವಾರ ಹೀಗೆ ಆಡಿದ ಮೇಲೆ ಪ್ಯಾರಿಸ್‌ಗೆ ಹೋಗಲು ಬೇಕಾದ ಮನೋಸ್ಥೈರ್ಯವೊಂದು ದಕ್ಕಿತು. ಗೋಪಿಚಂದ್ ಅಕಾಡೆಮಿಯಲ್ಲಿ ನಿತೇಶ್ ಅವರ ಕೌಶಲವನ್ನು ವರ್ಧಿಸಲೆಂದೇ ಮೂವರು ಪರಿಣತರು ನಿಯೋಜಿತರಾಗಿದ್ದರು.

‘ನಿತೇಶ್ ಎತ್ತರದ ಆಟಗಾರ. ಆರು ಅಡಿ ಎತ್ತರದ ಅವರ ದೇಹ ಸಹಜವಾಗಿಯೇ ಎದುರಾಳಿಗೆ ಸವಾಲೊಡ್ಡಲು ಪೂರಕವಾಗಿದೆ. ಅವರ ರಕ್ಷಣಾತ್ಮಕ ಆಟ ಮೊದಲಿನಿಂದಲೂ ಚೆನ್ನಾಗಿಯೇ ಇದೆ. ಸ್ಟ್ರೋಕ್ ಮೇಕಿಂಗ್‌ನಲ್ಲಿಯೂ ಚುರುಕಾದ ಆಟಗಾರ. ಭರಪೂರ ಪ್ರತಿಭೆಯುಳ್ಳ ಆಟಗಾರ ಅವರಾಗಿದ್ದರೆನ್ನುವುದು ನಿಜ. ಅವರಿಗೆ ತಂತ್ರದ ವಿಷಯದಲ್ಲಿ ಒಂದು ದಿಕ್ಕು ತೋರಿಸುವುದು ನಮ್ಮ ಕೆಲಸವಾಗಿತ್ತು. ಸೆಷನ್‌ಗಳನ್ನು ಮಿಶ್ರಣ ಮಾಡಿ, ಮೂರು ರೀತಿಯಲ್ಲಿ ಸವಾಲು ಒಡ್ಡುವಂತಹ ಆಟದ ಶೈಲಿಗಳಿಗೆ ಅವರನ್ನು ಮುಖಾಮುಖಿಯಾಗಿಸಿದೆವು. ಬೇರೆ ದೇಶದ ಆಟಗಾರರು ಒಡ್ಡಬಹುದಾದ ಸವಾಲುಗಳಿಗೆ ಅವರನ್ನು ಅಣಿಮಾಡಿದ್ದು ಹೀಗೆ’ ಎಂದು ಗೋಪಿಚಂದ್ ಅಕಾಡೆಮಿಯ ತರಬೇತುದಾರರಲ್ಲಿ ಒಬ್ಬರಾದ ರಾಜೇಂದ್ರ ಕುಮಾರ್ ಮಾಹಿತಿ ನೀಡಿದರು.

ಪ್ಯಾರಾ ಬ್ಯಾಡ್ಮಿಂಟನ್ ಆಡುವ ಬಹುತೇಕರು ಆತ್ಮತೃಪ್ತಿಗೆ, ಖುಷಿಗೆ ಆಡುವುದೇ ಹೆಚ್ಚು. ಅದನ್ನು ಸ್ಪರ್ಧಾತ್ಮಕ ಮಟ್ಟಕ್ಕೆ ಕೊಂಡೊಯ್ಯಬೇಕಾದರೆ ಈ ರೀತಿಯ ತರಬೇತಿ ತುಂಬಾ ಮುಖ್ಯ ಎನ್ನುವುದಕ್ಕೂ ಅವರು ಅಡಿಗೆರೆ ಎಳೆದರು.

ಫೈನಲ್ ಪಂದ್ಯ ಶುರುವಾಗುವ ಮೊದಲು ನಿತೇಶ್ ಫೇವರಿಟ್ ಆಗಿರಲಿಲ್ಲ. ಎದುರಲ್ಲಿ ಬ್ರೆಟ್ ಇದ್ದರು. ಹೀಗಾಗಿ ಪ್ಯಾರಾ ಬ್ಯಾಡ್ಮಿಂಟನ್ ವಿಶ್ಲೇಷಕರು ಅವರೇ ಗೆಲ್ಲುವ ನೆಚ್ಚಿನ ಆಟಗಾರ ಎಂದೇ ಹೇಳುತ್ತಿದ್ದರು. ರಾಜೇಂದ್ರ ಕುಮಾರ್ ತರಹದವರಿಗೆ ನಿತೇಶ್ ಅಂತಿಮ ಪಂದ್ಯದಲ್ಲಿ ಅಚ್ಚರಿಯನ್ನು ಒಡ್ಡುವುದರಲ್ಲಿ ಯಾವ ಅನುಮಾನವೂ ಇರಲಿಲ್ಲ.

‘ನಿತೇಶ್ ಕೆಚ್ಚು ಇರುವ ಆಟಗಾರ. ಅವರ ಸ್ಟ್ರೋಕ್ ಆಟದಲ್ಲಿ ಇದು ಸುಸ್ಪಷ್ಟವಾಗಿ ಕಾಣುತ್ತಿತ್ತು. ಒಂದಿಷ್ಟು ಫೈನ್ ಟ್ಯೂನಿಂಗ್ ಮಾಡಿಕೊಂಡರೆ ಅವರ ಆಟ ಬೇರೆಯದೇ ಮಟ್ಟಕ್ಕೆ ಹೋಗಬಲ್ಲದು ಎನ್ನುವುದು ನಮಗೆ ತಿಳಿದಿತ್ತು. ಬಹುಶಃ ಫೈನಲ್ ಪಂದ್ಯವೇ ಅದಕ್ಕೆ ಸೂಕ್ತ ವೇದಿಕೆ’ ಎಂದೂ ರಾಜೇಂದ್ರ ಕುಮಾರ್ ಅಂತಿಮ ಪಂದ್ಯಕ್ಕೆ ಮೊದಲು ಹೇಳಿದ್ದರು.

ಅವರು ಆಗ ಯಾವುದೋ ಊಹೆಯಿಂದ ಹೇಳಿದ್ದ ಮಾತು ಕೂಡ ನಿಜವಾಯಿತು. ಅಂತಿಮ ಸೆಟ್‌ನಲ್ಲಿ 16–16ರ ಸಮಬಲದ ಆಟ ನಡೆಯುತ್ತಿದ್ದಾಗ, ಬ್ರೆಟ್ ತುಸು ಲಯ ತಪ್ಪಿದಂತೆ ಕಂಡರು. ಆ ಹಂತದಲ್ಲಿ ಒಂದಿಷ್ಟು ನೋವು ಕೂಡ ಅವರನ್ನು ಬಾಧಿಸಿತು. ಕ್ಷಮತೆ ಹಾಗೂ ಮನೋಬಲ ಎರಡೂ ಹದ ತಪ್ಪದಂತೆ ನೋಡಿಕೊಂಡ ನಿತೇಶ್ ಕೊನೆಗೂ ಚಿನ್ನದ ನಗೆ ಬೀರಿದರು.

ನಿತೇಶ್ ಅವರು ತಮ್ಮ ಒಂದು ಕಾಲನ್ನು ಕಳೆದುಕೊಂಡಾಗ 15 ವರ್ಷದ ಹುಡುಗ. ಅಷ್ಟೇ ವರ್ಷಗಳು ಉರುಳಿದ ನಂತರ, ಅವರ ಬದುಕಿನಲ್ಲಿ ಐತಿಹಾಸಿಕ ಅಧ್ಯಾಯವೊಂದು ಮೂಡಿದೆ. ನೋವು ನೀಗಿಕೊಂಡವರ ಗಟ್ಟಿ ಸ್ಫೂರ್ತಿ ಕಥನವಾಗಿ ಅವರ ಬದುಕು ಎಂಥವರಿಗೂ ಕಂಡೀತು. ‘ಎಸ್‌ಎಲ್’ ಅರ್ಥಾತ್ ಕಾಲಿನ ಕೆಳಭಾಗದ ಸಮಸ್ಯೆ ಇರುವವರು ಆಡುವ ಬಗೆಯ ಪ್ಯಾರಾ ಬ್ಯಾಡ್ಮಿಂಟನ್ ಆಟದ ಸದ್ಯದ ದಿಗ್ಗಜರ ಪಟ್ಟಿಯಲ್ಲಿ ನಿತೇಶ್ ಹೆಸರು ಎದ್ದುಕಾಣುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in